**‘ನನ್ನ ತನಿಖಾ ಸಾಮರ್ಥ್ಯಕ್ಕೇ ಇದೊಂದು ಸವಾಲು. ಕೊಲೆಯಾಗಿ ಒಂದು ವಾರವಾದರೂ ಒಂದೇ ಒಂದು ಸುಳಿವು ಕೂಡ ಸಿಗುತ್ತಿಲ್ಲ. ಈ ಕೊಲೆ ಹೇಗೆ ನಡೆದಿರಬಹುದು ಎನ್ನುವ ಬಗ್ಗೆ ಸರಿಯಾದ ಥಿಯರಿ ಸಹಿತ ಹುಟ್ಟುಹಾಕಲು ಸಾಧ್ಯವಾಗುತ್ತಿಲ್ಲ...’ ಬೇಸರದಿಂದ ಹೇಳಿದ ಎಸಿಪಿ ರುದ್ರೇಶ್.**

ದುಡ್ಡಿಲ್ಲ... ಅಂತ ಅಪ್ಪ ಮಗಳು ನನ್ನನ್ನು ಅವಮಾನ ಮಾಡಿ, ನನಗೆ ಮತ್ತು ಬಿಜುಗೆ ಸಂಬಂಧ ಇದೆ ಅಂತ ಊರಿಗೆಲ್ಲಾ ಹಬ್ಬಿಸಿ, ಎಲ್ಲರೆದುರಿಗೆ ಅವಮಾನ ಮಾಡಿದರು.”

“ಅದಕ್ಕೇ ಲೂಸಿಯನ್ನು ಕೊಲೆ ಮಾಡಿಬಿಟ್ಟರಾ?...” ವ್ಯಂಗ್ಯವಾಗಿ ಪ್ರಶ್ನಿಸಿದ.

“ಸಾಯಿಸಬೇಕಿತ್ತು. ಅವಳನ್ನು ಸಾಯಿಸಿದರೆ ಅದರ ಆರೋಪ ಪಾಪದ ಬಿಜು ಮೇಲೆ ಬರುತ್ತೆ ಅಂತ ಸುಮ್ಮನಾದೆ.” ಅವಳ ಸಿಟ್ಟು ಆರಿರಲಿಲ್ಲ.

“ಕೊಲೆಯಾದ ದಿನ ನೀವು ಲೂಸಿಯನ್ನು ನೋಡಲು ಹೋಗಿದ್ದೀರಾ?”

“ಹೌದು.” ಯಾವುದೇ ಭಾವನೆಗಳಿಲ್ಲದೆ ನುಡಿದಳು.

‘ತನ್ನನ್ನು ಉಪಯೋಗಿಸಿಕೊಂಡು ನಡುನೀರಲ್ಲಿ ಕೈಬಿಟ್ಟ ಲೂಸಿಯನ್ನು ಸಿಂಥಿಯಾ ಕೊಲೆಮಾಡಿದಳಾ?’

ಮತ್ತೊಬ್ಬ ಸಸ್ಪೆಕ್ಟ್! ಇನ್ನೊಂದು ಸ್ಟ್ರಾಂಗ್ ಮೋಟಿವ್!

“ಸುಮಾರು ಒಂಬತ್ತು ಗಂಟೆಗೆ, ಅಲ್ಲಿಗೆ ಹೋಗಿದ್ದೆ. ಬಿಜು ಗೋವಾಕ್ಕೆ ಹೋಗುತ್ತಾನೆ ಬಾ ಅಂತ ಕರೆದಿದ್ದಳು. ನಾನು ದುಡ್ಡು ಕೊಡ್ತಾಳೇನೋ ಅಂತ ಹೋಗಿದ್ದೆ. ಎಷ್ಟು ಬೆಲ್ ಮಾಡಿದರೂ ಬಾಗಿಲು ತಟ್ಟಿದರೂ ಬಾಗಿಲು ತೆರೆಯಲಿಲ್ಲ. ಎಲ್ಲಾ ಲೈಟ್ ಆಫ್ ಆಗಿತ್ತು. ಮತ್ತೆ ನನಗೆ ಕರೆದು ಅವಮಾನ ಮಾಡಿಯಾಳು ಅಂತ ಸಿಟ್ಟಿನಲ್ಲಿ ವಾಪಸ್ ಹೋದೆ.”

“ನಿಮ್ಮ ಮಾತುಗಳನ್ನು ನಂಬಬಹುದಾ?”

“ನಂಬೋದು ಬಿಡೋದು ನಿಮಗೆ ಬಿಟ್ಟಿದ್ದು. ಲೂಸಿ ಸತ್ತಿದ್ದಕ್ಕೆ ನನಗೆ ವಿಷಾದವಿಲ್ಲ. ಅವಳು ಮಾಡಿದ ಮೋಸಕ್ಕೆ ಅವಳಿಗೆ ತಕ್ಕ ಶಾಸ್ತಿಯಾಗಿದೆ. ಇನ್ಯಾರಿಗೆ ಮೋಸ ಮಾಡಿದ್ದಳೋ, ಸಾಯಿಸಿದ್ದಾರೆ ಅನಿಸುತ್ತೆ.”

ಅವಳು ಎದ್ದು ಹೋದ ಬಹಳ ಹೊತ್ತಿನತನಕ ರುದ್ರೇಶ್ ಏನೂ ಮಾಡಲಾಗದೆ ಸುಮ್ಮನೆ ಕುಳಿತಿದ್ದ. ಇಡೀ ಕೇಸ್ ಯಾವ ಕಡೆಯಿಂದ ನೋಡಿದರೂ ಹೋಗಿ ಡೆಡ್ ಎಂಡ್‌ಗೆ ಬಂದು ನಿಲ್ಲುತ್ತಿತ್ತು. ಅದಲ್ಲದೇ ಅವನಿಗೆ ಉತ್ತರ ಸಿಗಲಾರದ ಮತ್ತೊಂದು ಪ್ರಶ್ನೆ ಮನದಲ್ಲಿ ನೆಲೆಯೂರಿತ್ತು.

‘ಎಲ್ಲಾ ಬಾಗಿಲುಗಳೂ, ಚಿಲಕಗಳೂ ಒಳಗಿನಿಂದ ಹಾಕಿರುವಾಗ, ಕೊಲೆಗಾರ ಹೊರಗಡೆ ಹೇಗೆ ಹೋದ?’

★★★

“ನನ್ನ ತನಿಖಾಸಾಮರ್ಥ್ಯಕ್ಕೇ ಇದೊಂದು ಸವಾಲು. ಕೊಲೆಯಾಗಿ ಒಂದು ವಾರವಾದರೂ ಒಂದೇ ಒಂದು ಸುಳಿವು ಸಹ ಸಿಗುತ್ತಿಲ್ಲ. ಈ ಕೊಲೆ ಹೇಗೆ ನಡೆದಿರಬಹುದು ಅನ್ನೋ ಸರಿಯಾದ ಥಿಯರಿಯನ್ನೂ ಹುಟ್ಟುಹಾಕಲು ಆಗುತ್ತಿಲ್ಲ.” ಲೂಸಿಯ ಮನೆಯಲ್ಲಿ ಮೂರನೇ ಬಾರಿಗೆ